ಓ.ಎಸ್. ನಂಬರ 38/22

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 03-06-2023.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಆರ್.ಎನ್.ಎಚ್. ವಕೀಲರಿಂದಃ**

ಈ ದಾವೆಯನ್ನು ಯಾವ ಯಾವ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಈ ಪ್ರಕರಣವನ್ನು ನಾನು ನನ್ನ ಮಕ್ಕಳಿಗೆ ಪಾಲು ಕೊಡುವುದಿಲ್ಲ ಎಂದು ಹೇಳಿ ದಾಖಲಿಸಿರುತ್ತೇನೆ. ಈ ಪ್ರಕರಣವನ್ನು ಪ್ರತಿವಾದಿಗಳು ನನ್ನ ವಿರುದ್ಧ ಪಾಲಿಗಾಗಿ ಈ ನ್ಯಾಯಾಲಯದಲ್ಲಿ ಕೇಸ್ ದಾಖಲಿಸಿದ ನಂತರ ನಾನು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ನಾನೇ ಮೊದಲು ದಾಖಲಿಸಿರುತ್ತೇನೆ. ನನ್ನ ಮಗ 2 ನೇ ಪ್ರತಿವಾದಿ ಪಾಲಿಗಾಗಿ ಯಾವಾಗ ಕೇಸ್ ದಾಖಲಿಸಿದ್ದಾನೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯವರು 2018 ನೇ ಇಸ್ವಿಯಲ್ಲಿ ಇದೇ ದಾವಾಸ್ತಿಯ ಸಂಬಂಧ ಪಾಲಿಗಾಗಿ ಕೇಸ್ ದಾಖಲಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಪ್ರತಿವಾದಿಗಳು ಪಾಲಿಗಾಗಿ ಕೇಸ್ ದಾಖಲಿಸಿದ ನಂತರ ಆ ಕಾರಣಕ್ಕಾಗಿ ಈ ಕೇಸ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯ ಸರ್ವೆ ನಂಬರ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ. 22 ರಲ್ಲಿ 11 ಗುಂಟೆ ಮತ್ತು 108 ಆಗಿರುತ್ತದೆ ಎಂದು ನುಡಿದಿರುತ್ತಾರೆ.

2. ಸರ್ವೆ ನಂ. 22 ರಲ್ಲಿ 7 ಎಕರೆ 38 ಗುಂಟೆ ಜಮೀನು ಇರುತ್ತದೆ. ಸದ್ರಿ ಜಮೀನು ಕೃಷಿ ಜಮೀನಾಗಿರುತ್ತದೆ. ಇನ್ನೊಂದು ದಾವಾಸ್ತಿ ಕೃಷಿಯೇತರ ಜಮೀನಾಗಿರುತ್ತದೆ. ಸದ್ರಿ ಕೃಷಿಯೇತರ ಜಮೀನು ಒಂದು 11 ಗುಂಟೆ ಮತ್ತು 8 ಗುಂಟೆ ಜಮೀನು ಇರುತ್ತದೆ. ಸದ್ರಿ ಈ ಮೇಲೆ ಹೇಳಿದ ಜಮೀನುಗಳ ಚೆಕ್ಕುಬಂಧಿ ನನಗೆ ಹೇಳಲಾಗುವುದಿಲ್ಲ. ನನ್ನ ದತ್ತು ತಾಯಿಯ ಹೆಸರು ಸಾವಂತ್ರವ್ವ ಕೋಂ ಫಕೀರಯ್ಯ ಹಿರೇಮಠ. ಯಾವಾಗ ದತ್ತಕವನ್ನು ಪಡೆಯಲಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ನಾನು 12 ನೇ ವಯಸ್ಸಿನಲ್ಲಿದ್ದಾಗ ನನ್ನನ್ನು ದತ್ತಕಕ್ಕೆ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ದತ್ತಕಕ್ಕೆ ಸಂಬಂಧಿಸಿದಂತೆ ನೋಂದಣಿ ಕಚೇರಿಯಲ್ಲಿ ನೋಂದಾವಣಿ ಆಗಿರುತ್ತದೆ. ಎಷ್ಟು ವರ್ಷಗಳ ಹಿಂದೆ ದತ್ತಕ ಪತ್ರ ನೋಂದಣಿ ಆಯಿತು ಎಂದು ನನಗೆ ನೆನಪಿಲ್ಲ. ದಾವಾಸ್ತಿಗಳು ಮೂಲತಃ ಸಾವಂತ್ರವ್ವ ಕೋಂ ಫಕೀರಯ್ಯ ಹಿರೇಮಠ ರವರಿಗೆ ಸೇರಿರುತ್ತದೆ. ದಾವಾಸ್ತಿಗಳು ನನ್ನ ಹೆಸರಿಗೆ ಯಾವಾಗ ಬಂತು ಎಂದು ನನಗೆ ನೆನಪಿಲ್ಲ. ಸದ್ರಿ ದಾವಾಸ್ತಿಗಳು ನನ್ನ ದತ್ತಕತಾಯಿ ಜೀವಂತ ಇದ್ದಾಗ ನನ್ನ ಹೆಸರಿಗೆ ಮಾಡಿರುತ್ತಾರೆ. ನಾನು ಹೇಳುವಂತೆ ನನ್ನ ದತ್ತಕತಾಯಿ ಆಕೆ ಜೀವಂತ ಇರುವಾಗ ದಾವಾಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು 12 ವರ್ಷ ವಯಸ್ಸಿನವನಾಗಿದ್ದಾಗ ನನ್ನ ದತ್ತಕತಾಯಿ ದಾವಾಸ್ತಿಗಳನ್ನು ನನ್ನ ಹೆಸರಿಗೆ ದಾನಪತ್ರ ಮಾಡಿರುತ್ತಾರೆ. ಸದ್ರಿ ದಾನಪತ್ರವನ್ನು ಈ ಪ್ರಕರಣದಲ್ಲಿ

ಹಾಜರಪಡಿಸಿರುತ್ತೇನೆ. ನಾನು ಹೇಳುವಂತೆ ಯಾವುದೇ ದಾನಪತ್ರವನ್ನು ಈ ಪ್ರಕರಣದಲ್ಲಿ ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಆತ ಹಾಜರಪಡಿಸಿದ ದಾಖಲಾತಿಗಳನ್ನು ತೋರಿಸಿ ಅದರಲ್ಲಿ ತಾನು ಹೇಳುವಂತಹ ದಾನಪತ್ರ ಯಾವುದು ಎಂದು ತೋರಿಸಲು ಕೇಳಿದಾಗ ಸಾಕ್ಷಿ ನನಗೆ ಹೇಳಲಾಗುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಹೇಳುವಂತೆ ದತ್ತಕತಾಯಿ ಯಾವುದೇ ದಾನಪತ್ರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ದತ್ತಕ ತಾಯಿ 20-26 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸಾಕ್ಷಿ ಮುಂದುವರೆದುಮರಣ ಹೊಂದಿದ ದಿನಾಂಕವನ್ನು ನಾನು ಮನೆಯಲ್ಲಿ ಬರೆದಿಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ದತ್ತಕ ತಾಯಿ ಮರಣ ಹೊಂದಿದ ಸಮಯದಲ್ಲಿ ನಾನು ಹಾಗೂ ನನ್ನ ಮಕ್ಕಳು ಜೊತೆಯಾಗಿ ವಾಸವಾಗಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ದತ್ತಕತಾಯಿ ಮರಣ ಹೊಂದಿದಾಗ ನನ್ನ ಮಕ್ಕಳು ಬಂದಿರುತ್ತಾರೆ. ಅದಕ್ಕಿಂತ ಮೊದಲು ಬೇರೆ ಬೇರೆಯಾಗಿದ್ದರು ಎಂದು ನುಡಿದಿರುತ್ತಾರೆ. ದಿನಾಂಕಃ 17-05-1997 ರಂದು ಮರಣ ಹೊಂದಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ದಿಃ 18-04-1961 ನೇ ಇಸ್ವಿಯಲ್ಲಿ ನನ್ನ ದತ್ತಕ ತಾಯಿ ಸಾವಂತ್ರವ್ವ ದತ್ತು ಪಡೆದುಕೊಂಡಿದ್ದರು ಎಂದರೆ ನೆನಪಿಲ್ಲ. ನನ್ನ ದತ್ತಕ ತಾಯಿ ಮರಣ ಹೊಂದಿದ ನಂತರ ದಾವಾಸ್ತಿ ವಾರಸುನಾತೆಯಿಂದ ದತ್ತಕ ಪತ್ರದ ಆಧಾರದಿಂದ ನನ್ನ ಹೆಸರಿಗೆ ಕಂದಾಯ ದಾಖಲೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4. ನನ್ನ ಮತ್ತು ನನ್ನ ಮಕ್ಕಳ ನಡುವೆ ಕುಟುಂಬದ ಆಸ್ತಿಗೆ ಸಂಬಂಧಿಸಿದಂತೆ ವಾಂಟಣಿ ಆಗಿರುವುದಿಲ್ಲ. ನನ್ನ ಜನಕ ತಂದೆಯ ಆಸ್ತಿಯಲ್ಲಿ ನನಗೆ ಪಾಲು ನೀಡಿರುವುದಿಲ್ಲ. ದಾವಾಸ್ತಿಯಲ್ಲಿ ನನ್ನ ಮಕ್ಕಳು ಸಾಗುವಳಿ ಮಾಡುತ್ತಿರಲಿಲ್ಲ, ನಾನೇ ಮಾಡಿರುತ್ತೇನೆ. ಪ್ರತಿವಾದಿಗಳು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ದಾವಾಸ್ತಿಯಲ್ಲಿ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಮಾತ್ರ ಸಾಗುವಳಿ ಮಾಡುತ್ತೇನೆ. ಪ್ರತಿವಾದಿಗಳು ನನ್ನ ವಿರುದ್ಧ ಪಾಲಿಗಾಗಿ ಕೇಸ್ ದಾಖಲಿಸಿದರು ಎಂಬ ಸಿಟ್ಟಿನಿಂದ ಈ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

5. 1 ಮತ್ತು 2 ನೇ ಪ್ರತಿವಾದಿಗಳು ದಾವಾಸ್ತಿಯಲ್ಲಿ ಸಾಮೂಹಿಕ ಕಬ್ಜಾದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ವಿನಾಕಾರಣ ಪ್ರತಿವಾದಿಗಳ ವಿರುದ್ಧ 2018 ನೇ ಇಸ್ವಿಯಲ್ಲಿ ಕೇಸ್ ದಾಖಲಿಸಿರುತ್ತೇನೆ ಎಂದರೆ ನನಗೆ ಹೊಡೆದ ಕಾರಣಕ್ಕೆ ಕೇಸ್ ಹಾಕಿರುತ್ತೇನೆ. ಪ್ರತಿವಾದಿಗಳು ಸದ್ರಿ ಪ್ರಕರಣದಲ್ಲಿ ತಕರಾರು ಸಲ್ಲಿಸಿದ ನಂತರ ನಾನು ಆ ಪ್ರಕರಣವನ್ನು ಮುಂದುವರೆಸಲಿಲ್ಲ ಎಂದರೆ ಸದ್ರಿ ಪ್ರಕರಣ ಸುಮಾರು 5 ವರ್ಷಗಳ ಹಿಂದೆ ಆಗಿದ್ದರಿಂದ  ನೆನಪಿಲ್ಲ. ಸದ್ರಿ ಪ್ರಕರಣದ ಸಂಖ್ಯೆ ಓಎಸ್ 12-2018 ಎಂದರೆ ನನಗೆ ನೆನಪಿಲ್ಲ. ಸದ್ರಿ ಪ್ರಕರಣವನ್ನು ನಾನು ಖಾಯಂ ಮನಾಯಿ ಹುಕುಂ ಆದೇಶ ಕೋರಿ ದಾಖಲಿಸಿರುತ್ತೇನೆ ಎಂದರೆ ನೆನಪಿಲ್ಲ. ಸದ್ರಿ ಪ್ರಕರಣವನ್ನು ಯಾವ ಕಾರಣಕ್ಕೆ ಮುಂದುವರೆಸಲಿಲ್ಲ ಎಂದು ನನಗೆ ಹೇಳಲಾಗುವುದಿಲ್ಲ. ನನಗೆ ಈ ಪ್ರಕರಣ ದಾಖಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ತಿಯಲ್ಲಿ ಸಾಮೂಹಿಕ ಕಬ್ಜೆದಾರಾಗಿದ್ದರೂ ಸಹ ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಅವರ ವಿರುದ್ಧ

ಪದೇ ಪದೇ ಈ ರೀತಿ ಸುಳ್ಳು ದಾವೆಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ಮೇಲೆ ಹೇಳಿದ ಸಾವಂತ್ರವ್ವ ರವರ ಮೊಮ್ಮಕ್ಕಳಾಗಿದ್ದರಿಂದ ದಾವಾಸ್ತಿಯಲ್ಲಿ ಸಾಮೂಹಿಕ ಹಕ್ಕು ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**ಸಿವಿಲ್ ಜಡ್ಜ, ಮುಂಡಗೋಡ.**